# ಅನುಭಾವಿಕ ಹಿನ್ನೆಲೆಯಲ್ಲಿ ಮಾಸ್ತಿಯವರ ಸಣ್ಣ ಕತೆಗಳು ಮತ್ತು ಸಮಕಾಲೀನತೆ

**ಶೈಲಜ ವಿ.**

ಸಂಶೋಧನಾ ವಿದ್ಯಾರ್ಥಿ, ಬೆಂ.ಉ.ವಿ.ವಿ., ಟಮಕ, ಕೋಲಾರ.

**DOI: https://doi.org/10.5281/zenodo.18785248**

**ABSTRACT:**

ಕನ್ನಡ ಸಣ್ಣಕಥಾ ಸಾಹಿತ್ಯಕ್ಕೆ ಭದ್ರ ಬುನಾದಿ ಹಾಕಿಕೊಟ್ಟ ಮಾಸ್ತಿ ವೆಂಕಟೇಶ ಅಯ್ಯಂಗಾರರು, ತಮ್ಮ ವಿಶಿಷ್ಟ ಕಥನ ಕಲೆಯ ಮೂಲಕ 'ಸಣ್ಣಕಥೆಗಳ ಜನಕ' ಎನಿಸಿಕೊಂಡಿದ್ದಾರೆ. ಅವರು ರಚಿಸಿದ ಸಾಮಾಜಿಕ, ಐತಿಹಾಸಿಕ ಮತ್ತು ಪೌರಾಣಿಕ ಕಥೆಗಳು ಕೇವಲ ಮನರಂಜನೆಗೆ ಸೀಮಿತವಾಗದೆ, ಬದುಕಿನ ಗಂಭೀರ ಮೌಲ್ಯಗಳನ್ನು ಮತ್ತು ಮಾನವೀಯತೆಯ ಘನತೆಯನ್ನು ಎತ್ತಿಹಿಡಿಯುತ್ತವೆ. ಸರಳ ನಿರೂಪಣೆ ಮತ್ತು ಆಪ್ತವಾದ ಪಾತ್ರಗಳ ಮೂಲಕ ಸಮಕಾಲೀನ ಬದುಕಿನ ಸಂಕೀರ್ಣತೆಗಳಿಗೆ ಪರಿಹಾರ ಕಂಡುಕೊಳ್ಳುವ ಬಗೆಯನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಜಾತಿ, ಮತ ಮತ್ತು ಕಾಲದ ಹಂಗಿಲ್ಲದೆ, ಮನುಷ್ಯತ್ವಕ್ಕೆ ಮೊದಲ ಆದ್ಯತೆ ನೀಡುವ ಮಾಸ್ತಿಯವರ ಜೀವನದೃಷ್ಟಿ ಇಂದಿನ ಸಮಾಜಕ್ಕೆ ಅತ್ಯಂತ ಪ್ರಸ್ತುತವಾಗಿದೆ. ಸಾಂಪ್ರದಾಯಿಕ ಚೌಕಟ್ಟನ್ನು ಮೀರಿ ನಿಲ್ಲುವ ಅವರ ಕಥಾ ಪಾತ್ರಗಳು ಮತ್ತು ಅವುಗಳ ಅನುಭಾವಿಕ ನೆಲೆಗಳನ್ನು ಇಲ್ಲಿ ಗುರುತಿಸಲಾಗಿದೆ.

**KEYWORDS:**

ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕನ್ನಡ ಸಣ್ಣಕಥೆಗಳು, ಸಮಕಾಲೀನತೆ, ಮಾನವೀಯ ಮೌಲ್ಯಗಳು, ಜೀವನ ದರ್ಶನ.

ಆಧುನಿಕ ಕನ್ನಡ ಗದ್ಯ ಸಾಹಿತ್ಯ ಪ್ರಕಾರಗಳಲ್ಲಿ ಕಥಾ ಸಾಹಿತ್ಯವೂ ಒಂದು. ಇದು ಪಾಶ್ಚಾತ್ಯರ ಪ್ರಭಾವದಿಂದ ಕನ್ನಡಕ್ಕೆ ಬಂದಿದೆ. ಕಥಾಪ್ರಕಾರ ಎಂದಾಗ ಅದರಲ್ಲಿ ಹಲವಾರು ವಿಧಗಳನ್ನು ಕಾಣಬಹುದು: ದೀರ್ಘ ಕಥೆಗಳು, ಸಣ್ಣ ಕಥೆಗಳು, ಕಥನ ಕವನಗಳು ಹಾಗೂ ಇತ್ತೀಚೆಗೆ ಪ್ರಚಲಿತವಾಗಿರುವಂತಹ ನ್ಯಾನೋ ಕಥೆಗಳು. ಅತಿ ಸಣ್ಣ ಪ್ರಕಾರವಾದ ಪುಟ್ಟ ಕಥೆ ಹೀಗೆ ಹಲವಾರು ಪ್ರಕಾರಗಳು ಸಾಹಿತ್ಯದ ಚಲನೆಗೆ ತಕ್ಕಂತೆ ಹೊಸ ಹೊಸ ಪ್ರಯೋಗಗಳ ರೂಪದಲ್ಲಿ ಕಾಣಿಸುತ್ತಿವೆ. ಕನ್ನಡದಲ್ಲಿ ಮೊದಲು ಪ್ರಾರಂಭವಾದದ್ದು 'ಸಣ್ಣ ಕಥೆ' ಎಂಬ ಹೆಸರಿನಲ್ಲಿ. ಇದು ಇಂಗ್ಲಿಷಿನ ಪ್ರಭಾವದಿಂದ 'short story' ಎಂಬುದಕ್ಕೆ ಸಂವಾದಿಯಾಗಿ ಬಳಕೆಯಾಗುತ್ತಿದ್ದಂತಹ ಪದವಾಗಿದೆ.

ಸಣ್ಣ ಕಥೆಯು ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಒಂದು. ಸಣ್ಣ ಕಥೆ ವಿಶಿಷ್ಟ ಸಾಹಿತ್ಯ ಪ್ರಕಾರವಾಗಿ ಕನ್ನಡದಲ್ಲಿ ಮೂಡಿಬಂದದ್ದು ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಎನ್ನಬೇಕು. ಸಣ್ಣಕಥೆಗಳು ಆಸಕ್ತಿ ಕೇಂದ್ರೀಕರಿಸುವ, ಸರಳ ಹಾಗೂ ಚುರುಕುಗತಿಯುಳ್ಳವು. ಪಂಜೆ ಅವರನ್ನು ಕನ್ನಡದ ಪ್ರಥಮ ಕಥೆಗಾರರೆಂದು ಗುರುತಿಸಲಾಗಿದೆ. ಇವರ 'ನನ್ನ ಚಿಕ್ಕ ತಾಯಿ' ಎಂಬ ಕಥೆಯು ಕನ್ನಡದಲ್ಲಿ ಪ್ರಕಟವಾದ ಪ್ರಥಮ ಸಣ್ಣ ಕತೆಯಾದರೂ, ನೂರು ಸಣ್ಣಕಥೆಗಳನ್ನು ಕನ್ನಡ ಸಾಹಿತ್ಯದ ಕಿಸೆಗೆ ಸೇರಿಸಿ ನಿತ್ಯ ಜೀವನದ ಸತ್ಯ ಸಂಗತಿಗಳ ಮೇಲೆ ಬೆಳಕು ಚೆಲ್ಲಿದವರು ಶ್ರೀನಿವಾಸರು. ಸಣ್ಣ ಕತೆಗಳಿಗೆ ಒಂದು ಸ್ವರೂಪವನ್ನು ತಂದುಕೊಟ್ಟು, ಅದನ್ನು ಗಂಭೀರವಾದ ಜೀವನ ಚಿಂತನೆಯ ಮಾಧ್ಯಮವನ್ನಾಗಿ ಮಾಡಿ ಭಾಷೆಯನ್ನು ಅದಕ್ಕೆ ಹದಗೊಳಿಸಿದವರು ಶ್ರೀನಿವಾಸರು. ಮಾಸ್ತಿಯವರ ವಿಸ್ತಾರವಾದ ಜೀವನಾನುಭವ, ಮಾನವೀಯತೆ ಮತ್ತು ದೂರದೃಷ್ಟಿಯ ಚಿಂತನೆಗಳು ಸರ್ವಕಾಲಿಕವಾದವು. ಅವುಗಳನ್ನು ಸಾಹಿತ್ಯೇತರ ವಿದ್ಯಾರ್ಥಿಗಳಿಗೂ, ಮಕ್ಕಳಿಗೂ ಹಾಗೂ ಮುಂದಿನ ಪೀಳಿಗೆಗೆ ತಲುಪಿಸುವ ಆಶಯದೊಂದಿಗೆ ಅನುಭಾವಿಕ ಹಿನ್ನೆಲೆಯಲ್ಲಿ ನೋಡುವ ಪ್ರಯತ್ನ ಇಲ್ಲಿ ನಡೆದಿದೆ.

ಜೀವನದ ನಿಜಗಳೇನು? ನೋವುಗಳೇನು? ತಾಳುವುದೆಂದರೇನು? ಗೆಲ್ಲುವುದೆಂದರೇನು? ಎಂಬ ಭಾವಾರ್ಥಗಳನ್ನು ಭಾವಾತಿರೇಕದ ಸೋಗಿಲ್ಲದೆ ಎದುರಿಸಲು ಮಾಸ್ತಿ ಕಲಿಸುತ್ತಾರೆ. ನಮ್ಮ ಭಾವನಾ ಪ್ರಪಂಚವನ್ನ ಪಕ್ವವಾಗಿಸಬಲ್ಲ ಶಿಕ್ಷಣ ಅವರ ಕತೆಗಳಿಂದ ಖಂಡಿತ ಸಿಗುತ್ತದೆ. ನಯವಾದ ಮಾತನಾಡುವವರನ್ನೆಲ್ಲ ಅನುಮಾನದಿಂದ ನೋಡುವುದು ಸರಿ ಎನಿಸುವ ಈ ಕಾಲದಲ್ಲಿ, ಅಂತಹ ಮಾತುಗಳನ್ನೇ ಆಡಿಯೂ ಪ್ರಾಮಾಣಿಕವಾಗಿದ್ದ ಮಾಸ್ತಿಯವರಂತಹ ಅಪ್ಪಟ ಸಾಹಿತಿಗಳು ತೀರಾ ವಿರಳ. 'ಕನ್ನಡದ ಸಣ್ಣ ಕಥೆಗಳ ಜನಕ' ಎಂಬುದೇ ಅವರಿಗೆ ಸಂದಿರುವ ಜನಮನ್ನಣೆ. ಕನ್ನಡದಲ್ಲಿ ಸಣ್ಣ ಕಥೆಗಳೆಂಬ ಪ್ರಕಾರವು ಇನ್ನೂ ಕಣ್ಣು ಬಿಡುತ್ತಿದ್ದ ಕಾಲದಲ್ಲಿ ಮಾಸ್ತಿ ಅವರು ಬರೆದ ನೂರಾರು ಸಣ್ಣ ಕಥೆಗಳು ಆ ಪ್ರಕಾರಕ್ಕೊಂದು ಭದ್ರವಾದ ಬುನಾದಿಯನ್ನು ಹಾಕಿಕೊಟ್ಟವು. ಈ ಪ್ರಕಾರವು ಇಂದು ಹೆಮ್ಮರವಾಗಿ ಬೆಳೆದು ನಿಂತು ಫಲ ಕೊಡುತ್ತಿದೆ. ಕನ್ನಡದಲ್ಲಿ ಮಾಸ್ತಿಯವರಿಗಿಂತಲೂ ಮೊದಲು ಸಣ್ಣ ಕಥೆಗಳನ್ನು ಬರೆದವರಿದ್ದಾರೆ; ಕೆರೂರು ವಾಸುದೇವಾಚಾರ್ಯ,

ಎಂ.ಎಸ್. ಕಾಮತ್, ಪಂಜೆ ಮಂಗೇಶರಾಯರು ಮತ್ತು ಇನ್ನೂ ಅನೇಕರು.

1920ರಲ್ಲಿಯೇ ಮಾಸ್ತಿಯವರು ತಮ್ಮ ಮೊದಲ ಕಥಾ ಸಂಕಲನವನ್ನು ಹೊರತಂದಿದ್ದರು. 'ರಂಗನ ಮದುವೆ' ಹಾಗೂ ಇತರೆ ಕೆಲವು ಸಣ್ಣ ಕಥೆಗಳು ಇದರಲ್ಲಿ ಸೇರಿದ್ದವು. ಮಾಸ್ತಿ ಅವರು ತಮ್ಮ ಮೊದಲ ಸಣ್ಣ ಕಥೆಯನ್ನು ಅಪ್ಪನ ಮರಣಶಯ್ಯೆಯ ಬಳಿ ಕುಳಿತು ಬರೆದುದ್ದಾಗಿ ಬರೆದುಕೊಂಡಿದ್ದಾರೆ. ಕನ್ನಡ ಮಾತ್ರವಲ್ಲದೆ ಜಗತ್ತಿನ ಸಾಹಿತ್ಯದಲ್ಲಿ ಸಣ್ಣ ಕಥೆಗಳನ್ನು ಪ್ರಮುಖ ಮಾಧ್ಯಮವಾಗಿ ಮಾಡಿಕೊಂಡು ದೊಡ್ಡ ಸಾಧನೆ ಮಾಡಿದ ಪ್ರಮುಖ ಬರಹಗಾರರಲ್ಲಿ ಮಾಸ್ತಿಯವರೂ ಒಬ್ಬರೆಂದು ವಿಮರ್ಶಕರಿಂದ ಪ್ರಶಂಸೆಗೂ ಪಾತ್ರರಾದರು. ಮಾಸ್ತಿಯವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನ ಲಭಿಸಿರುವುದು ಕೂಡ ಅವರ ಸಣ್ಣ ಕಥೆಗಳಿಗೆ ಎಂಬುದನ್ನು ನಾವು ನೆನಪಿಡಬೇಕು. ಮೊದಲ ಸಂಕಲನಕ್ಕೆ ಮಾತ್ರ 'ಇತರ ಕೆಲವು ಕಥೆಗಳು' ಎಂಬ ಹೆಸರಿದೆ. ಮೊದಲ ಸಂಕಲನ ಪ್ರಕಟವಾಗುವ ಹೊತ್ತಿಗೆ ಆಗಲೇ ಅವರ ರಂಗನ ಮದುವೆ ಮತ್ತಿತರ ಕೆಲವು ಕಥೆಗಳು ಬಿಡಿ-ಬಿಡಿಯಾಗಿ ಪ್ರಕಟಗೊಂಡಿದ್ದವು. ಹಾಗಾಗಿ 'ಇತರ ಕೆಲವು ಕಥೆಗಳು' ಮೊದಲ ಸಂಕಲನವಾಗಿ ಹೊರಬಂತು. ಉಳಿದೆಲ್ಲವನ್ನು 'ಸಣ್ಣ ಕಥೆ ಭಾಗ-1', 'ಭಾಗ-2' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದು, ಮಾಸ್ತಿಯವರು ಈ ಸಂಕಲನಗಳಿಗೆ ಬೇರೆಬೇರೆ ಹೆಸರು ಕೊಡುವ ಗೋಜಿಗೆ ಹೋಗಿರಲಿಲ್ಲ. ಮಾಸ್ತಿ ಅವರು ಸರಿಯಾಗಿ ಒಂದು ನೂರು ಸಣ್ಣ ಕಥೆಗಳನ್ನು ಬರೆದು ಶತಕ ಬಾರಿಸಿದ್ದಾರೆ.

ಇವುಗಳನ್ನು ಅಧ್ಯಯನ ಅನುಕೂಲಕ್ಕಾಗಿ ವರ್ಗೀಕರಣ ಮಾಡಿಕೊಳ್ಳಬಹುದು. ನೂರರಲ್ಲಿ 49 ಸಾಮಾಜಿಕ ಕಥೆಗಳಿವೆ. ಅವುಗಳೆಂದರೆ: ರಂಗನ ಮದುವೆ, ರಂಗಪ್ಪನ ಕೋರ್ಟ್‌ಶಿಪ್, ಮೊಸರಿನ ಮಂಗಮ್ಮ, ಕಲ್ಮಾಡಿಯ ಕೋಣ, ಜೋಗ್ಯರ ಅಂಜಪ್ಪನ ಕೋಳಿ, ಕೃಷ್ಣಮೂರ್ತಿಯ ಹೆಂಡತಿ, ನಳಿನಿಯ ತಂದೆ, ರಂಗಪ್ಪನ ದೀಪಾವಳಿ, ವೆಂಕಟಶಾಮಿಯ ಪ್ರಣಯ, ಆಚಾರವಂತ ಅಯ್ಯಂಗಾರ್ರು, ಮಾಯಣ್ಣನ ಕನ್ನಡಿ ಇತ್ಯಾದಿ. 37 ಐತಿಹಾಸಿಕ ಕಥೆಗಳಿವೆ. ಅವುಗಳೆಂದರೆ: ಬಾದಷಹನ ನ್ಯಾಯ, ನಿಜಗಲ್ಲಿನ ರಾಣಿ, ಪ್ರಿಯದರ್ಶಿ ಅಶೋಕ, ಪ್ರಾಯಶ್ಚಿತ್ತ, ಹೊಯ್ಸಳನ ದಳಪತಿ, ಕೆಟ್ಟಕಾಲ, ಹೆಸರು ಸಾಯುವುದಿಲ್ಲ, ಬ್ಯಾಬಿಲೋನ್ ಕುಮಾರಿ, ಪೋಲಾನಿಯ ಹೇಳಿಕೆ, ಪದವಿಯ ಅಪಾಯ, ಅಲೆಕ್ಸಾಂಡರ್ ಗುರುದಕ್ಷಿಣೆ, ನೆಪೋಲಿಯನ್ ಸೋಲು. ಮಾಸ್ತಿಯವರು ಬರೆದ ಪೌರಾಣಿಕ ಕಥೆಗಳು: ಹೇಮಕೂಟದಿಂದ ಬಂದ ಮೇಲೆ, ಒಂದು ಹಳೆಯ ಕಥೆ, ಗೌತಮಿ ಹೇಳಿದ ಕಥೆ, ಇರುವೆಗಳ ಲೋಕ, ಶ್ರೀ ಕೃಷ್ಣನ ಅಂತಿಮ ದರ್ಶನ, ಕುಚೇಲನ ಮರಿಮಗ ಇತ್ಯಾದಿ ಮಹಾ ಚೇತನಗಳನ್ನು ಕುರಿತು ಬರೆದ ಕಥೆಗಳು ಆರು. ದಂತ ಕಥೆಗಳು, ದೃಷ್ಟಾಂತ ಕಥೆಗಳು, ಚಮತ್ಕಾರ ಪ್ರದರ್ಶನ ಕಥೆಗಳು, ಅದ್ಭುತ ರಮ್ಯ, ಫ್ಯಾಂಟಸಿ ಚರ್ಚೆಗಳು, ಐತಿಹಾಸಿಕ, ಸಾಮಾಜಿಕ, ಪೌರಾಣಿಕ – ಹೀಗೆ ಅವುಗಳನ್ನು ಮಾಸ್ತಿ ಸಮಕಾಲೀನಗೊಳಿಸಿರುವ ಪರಿಯನ್ನು ವಿಶೇಷವಾಗಿ ಗಮನಿಸಬೇಕು. ಅವರ ಕಥೆಗಳಲ್ಲಿ ಸಮಕಾಲೀನ ಪಾತ್ರಗಳು ಬರುವಂತೆ ಪುರಾಣದ ಪಾತ್ರಗಳು ಬರುತ್ತವೆ. ಎಂದೋ ಅಳಿದುಹೋಗಿರುವ ಚಕ್ರವರ್ತಿಯ

ಪಾತ್ರ ಬರುವಂತೆ ಹಳ್ಳಿಯ ಕಡುಬಡವನೊಬ್ಬನ ಪಾತ್ರವೂ ಬರುತ್ತದೆ. ಮಾಸ್ತಿ ಅವರ ಕಥೆಗಳ ಮುಖ್ಯ ಪಾತ್ರಗಳೆಲ್ಲ ನಮ್ಮ ಅಕ್ಕಪಕ್ಕದ ಮನೆಯವರೇನೋ ಎಂಬ ಆಪ್ತಭಾವ ಮೂಡಿಸುತ್ತವೆ. ಕಾಲ, ದೇಶ, ಭಾಷೆ, ಪಾತ್ರ, ಜನಜೀವನ ಇವೆಲ್ಲ ಬೇರೆ ಬೇರೆಯಾದರೂ ಮಾಸ್ತಿ ಅವರ ಕಥೆಗಳ ಒಟ್ಟು ಧ್ವನಿ ಇವತ್ತಿನ ಮಾನವೀಯ ಮೌಲ್ಯದ ಘನತೆಯನ್ನೇ ಪ್ರತಿನಿಧಿಸುತ್ತವೆ.

ಮಾಸ್ತಿ ಅವರಲ್ಲಿ ಆದರ್ಶ ಪಾತ್ರಗಳು ಅಧಿಕ. ದುಷ್ಟರು, ಕ್ರೂರಿಗಳು, ಅಯೋಗ್ಯರು ಎನ್ನಬಹುದಾದ ಪಾತ್ರಗಳು ಕಡಿಮೆ ಇದ್ದರೂ ಅವುಗಳ ಬಗ್ಗೆ ಇನ್ನಿಲ್ಲದ ಅನುಕಂಪವಿದೆ. ದುಷ್ಟತನವು ದೌರ್ಬಲ್ಯ ಎನ್ನುವುದು ಅವರ ಮನೋಧರ್ಮ. ಆದರ್ಶ ಸ್ತ್ರೀ ಪಾತ್ರಗಳ ಬಗ್ಗೆ ಮಾಸ್ತಿಯವರಿಗೆ ಅಭಿಮಾನ ಹೆಚ್ಚು. 'ಕಾಮನ ಹಬ್ಬ'ದ ಕಥೆಯಲ್ಲಿನ ಸಾವಿತ್ರಮ್ಮನ ಪಾತ್ರ; ಗಂಡ ಶ್ರೀನಿವಾಸ ಶಾಸ್ತ್ರಿಯು ಮನೆ ಬಿಟ್ಟು ಸನ್ಯಾಸಿಯಾದಾಗ ತನ್ನ ಪಾಲಿಗೆ ಬಂದ ಅತ್ತೆಯನ್ನು ಪೊರೆಯುವ ಪರಿ, 'ಶಾರಿಪುತ್ರನ ಕೊನೆಯ ದಿನಗಳು' ಕಥೆಯಲ್ಲಿನ ನರಸಿಂಹ ವರ್ಮನು ಜೀವನದಲ್ಲಿ ಜಿಗುಪ್ಸೆ ತಾಳಿ ಶಾರಿಪುತ್ರನಾಗಿ ಸಣ್ಣ ಮಗಳನ್ನು, ವಯಸ್ಸಾದ ತಂದೆಯನ್ನು ತೊರೆದಾಗ ವೇದವತಮ್ಮಳು "ನನ್ನನ್ನೇ ನಿಮ್ಮ ಮಗನೆಂದು ತಿಳಿಯಿರಿ, ಅವರ ಸ್ಥಾನದಲ್ಲಿ ನಿಂತು ನಿಮ್ಮ ಕೊನೆಯ ದಿನಗಳ ಕಾರ್ಯಗಳನ್ನು ನಾನೇ ಮುಗಿಸುತ್ತೇನೆ" ಎಂಬ ಧೈರ್ಯದ ಮಾತುಗಳನ್ನು ಚಿಂತಿತನಾದ ತನ್ನ ಮಾವನಿಗೆ ಹೇಳುವಂತಹ ಅನೇಕ ಆದರ್ಶ ಸ್ತ್ರೀ ಪಾತ್ರಗಳನ್ನು ಮಾತನಾಡಿಸಿದ್ದಾರೆ. ಮಾಸ್ತಿ ಅವರ ಎಲ್ಲಾ ಕೃತಿಗಳಲ್ಲಿ ಸರಳತೆಗೆ ಮೊದಲ ಪಟ್ಟ. ಸರಳತೆ ಮಾಸ್ತಿ ಕೃತಿಗಳ ಗುಣವು. ಅನುಪಮವಾದ ಶಬ್ದ ಚಿತ್ರಗಳನ್ನು ಸೃಷ್ಟಿಸಿರುವುದು ಉಂಟು. ಆದರೆ ಸರಳವಾದ ಶೈಲಿಯಲ್ಲಿ ಮಾಸ್ತಿ ಅವರು ಸೋತಿರುವುದಕ್ಕಿಂತ ಗೆದ್ದಿರುವುದೇ ಹೆಚ್ಚು. ಸಾಧಾರಣ ಮಾತುಗಳಿಂದ ಅಸಾಧಾರಣ ಚಿತ್ರ ನಿರ್ಮಿಸುವ ಕಲೆ ಅವರದು. ಮಾಸ್ತಿ ಅವರ ಶೈಲಿ ಅವರಿಗೆ ವಿಶಿಷ್ಟ ಕೀರ್ತಿ ತಂದುಕೊಟ್ಟಿದೆ.

ಇವರ ಕಥೆಗಳ ಪಾತ್ರಗಳಾದ ಗಯಟೆ, ಶೇಕ್ಸ್‌ಪಿಯರ್, ರಾಮಾನುಜಾಚಾರ್ಯ ಮುಂತಾದವರೆಲ್ಲ ವಡ್ಡರ ವೆಂಕಟಿಗ, ಅಂಜಪ್ಪ, ಮೊಸರಿನ ಮಂಗಮ್ಮನವರಂತೆ ನಮ್ಮದೇ ಕನ್ನಡ ಭಾಷೆ ಮಾತನಾಡುವವರು. ಈ ಎಲ್ಲರ ಕಥೆಗಳು ಮುಟ್ಟಬಲ್ಲ ಮಾನವೀಯತೆ ಈ ಸಣ್ಣ ಕಥೆಗಳನ್ನು ಬರೆದ ಉದ್ದೇಶವನ್ನು ಮಾಸ್ತಿ ಅವರೇ ತಮ್ಮ ಮಾತುಗಳಲ್ಲಿ ವಿವರಿಸುವುದನ್ನು ಗಮನಿಸಿ ಮುಂದುವರೆಯುವುದು ಸೂಕ್ತ. "ನನ್ನ ಕಥೆಗಳನ್ನು ಬರೆಯುವಲ್ಲಿ ನನ್ನ ಉದ್ದೇಶ ಒಂದೇ ಒಂದು ಎಂಬುದನ್ನು ನಾನು ಹಲವು ಸಂದರ್ಭಗಳಲ್ಲಿ ಸೂಚಿಸಿದ್ದೇನೆ. ಆ ಉದ್ದೇಶ ಜೀವನ ನನಗೆ ನೀಡಿರುವ ದರ್ಶನವನ್ನು ವಿವರಿಸುವ ಚಿತ್ರಗಳನ್ನು ಕೊಡುವುದು. ಇಂದಿನ ನಮ್ಮ ನಾಡಿನ, ನಮ್ಮ ರಾಷ್ಟ್ರದ, ಬೇರೆ ಹತ್ತು ರಾಷ್ಟ್ರಗಳ ಬಹುತೇಕ ಜೀವನ ಚಿತ್ರಗಳು ನನ್ನ ಕಥೆಗಳಲ್ಲಿ ಕಾಣುತ್ತವೆ. ಇವು ಸತ್ಯವನ್ನು ಬಿಂಬಿಸುತ್ತವೆ ಎಂದು ಓದುವವರಿಗೆ ಕಂಡರೆ ನನ್ನ ಕೆಲಸ ಸಾರ್ಥಕವಾಯಿತು" ಎಂಬ ಮಾತುಗಳೇ ಅವರ ಕಥೆಗಳ ಅಂತರಾಳವನ್ನು ತೆರೆದಿಡುತ್ತವೆ. ಇದರ ಆಚೆಗೆ ಇದನ್ನು ಓದುವವರು ಇವುಗಳಲ್ಲಿ ಜೀವನವನ್ನು

ಕುರಿತು ಇಂಥದ್ದೇ ನೀತಿ ಮುಂತಾದವನ್ನು ನಿರೂಪಿಸುವ ಉದ್ದೇಶ ಇದೆ ಎಂದು ಭಾವಿಸಬಹುದು. ದಿಟವಾದ ಜೀವನದಿಂದ ಒಂದು ಭಾವ ತೋರುವಂತೆ ಜೀವನದ ಚಿತ್ರದಿಂದಲೂ ಒಂದು ಭಾವ ತೋರುವುದು ಸಹಜ.

ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಸರ್ಕಾರದ ಉನ್ನತ ಹುದ್ದೆಗಳಲ್ಲಿ ವಿವಿಧ ಸ್ಥಳಗಳಲ್ಲಿ ಅನುಭವಗಳಿಸಿ ಜನಸಾಮಾನ್ಯರನ್ನು, ಜನಜೀವನವನ್ನು ಹತ್ತಿರದಿಂದ ಗಮನಿಸಿದರು. ನಮ್ಮ ಜನರ ಆಚಾರ ವಿಚಾರ, ಸಂಸ್ಕೃತಿ, ಪರಂಪರೆ, ಬದುಕಿನ ರೀತಿ ನೀತಿ ಮೊದಲಾದವುಗಳ ಬಗ್ಗೆ ಆಸಕ್ತಿ ತಳೆದವರು. ಶುಚಿಯಾದ ಆದರ್ಶವಾದ ಸಂಪ್ರದಾಯಕ್ಕೆ ನಿಷ್ಠೆ ತೋರಿದವರು, ರಾಜ ಮಹಾರಾಜರ ಗೌರವಕ್ಕೆ ಪಾತ್ರರಾದವರು. ಬ್ರಿಟಿಷರ ಆಡಳಿತವನ್ನು, ಬ್ರಿಟಿಷ್ ಆಡಳಿತಗಾರರನ್ನು ಕಣ್ಣಾರೆ ಕಂಡವರು. ಸಂಪ್ರದಾಯ ಬದ್ಧವಾದ ಮನೆತನದಲ್ಲಿ ಹುಟ್ಟಿ ಬೆಳೆದವರು, ದೊಡ್ಡವರನ್ನು, ದೊಡ್ಡ ಬದುಕನ್ನು ನೋಡಿದವರು, ಅನುಸರಿಸಿದವರು. ತಮ್ಮಂತೆ ಇತರರು ಅನುಸರಿಸಲು ಆಶಿಸಿದವರು, ಜನರ ಬದುಕು ದೊಡ್ಡದಾಗಲು ಹಾರೈಸಿದವರು. ಇಂತಹ ಪಾತ್ರ ಸನ್ನಿವೇಶ ನಿರೂಪಣೆಗಳು ಮಾಸ್ತಿ ಅವರ ಕೃತಿಗಳಲ್ಲಿ ಯಥೇಚ್ಛವಾಗಿ ಕಂಡುಬರುತ್ತವೆ.

ಮಾಸ್ತಿ ಅವರ ಸಣ್ಣ ಕಥೆಗಳು ಭಾರತೀಯ ಪರಂಪರೆಯ ಉತ್ತಮ ಜೀವನ ಮೌಲ್ಯಗಳನ್ನು ಗುರುತಿಸುವ, ಶೋಧಿಸುವಾಗ ಘನತೆಯನ್ನು ಎತ್ತಿ ಹಿಡಿಯುವ ಪರಿಯನ್ನು ಬಲವಾಗಿ ಪ್ರತಿಪಾದಿಸುತ್ತವೆ. ಆದರೆ ಮಾನವೀಯತೆಯ ಪ್ರಶ್ನೆ ಬಂದಾಗ ಮಾಸ್ತಿಯವರು ಸಮಾಜದ ಕಟ್ಟುಪಾಡುಗಳನ್ನು ಸಡಿಲಗೊಳಿಸಿ ಮನುಷ್ಯತ್ವದ ಪರವಾಗಿ ಆಲೋಚಿಸುತ್ತಾರೆ. ಇದಕ್ಕೆ 'ಹೆಮ್ಮಕ್ಕಳಾವು', 'ಆಚಾರವಂತ ಅಯ್ಯಂಗಾರ್ರು' ಮುಂತಾದ ಕಥೆಗಳೇ ಸಾಕ್ಷಿ. ಮಾಸ್ತಿ ಅವರು ಬರೆದಿರುವ 'ವೆಂಕಟಿಗನ ಹೆಂಡತಿ' ಎಂಬ ಕಥೆಯೊಂದು ಒಡವೆ ವಸ್ತುಗಳ ಮೋಹಕ್ಕೆ ಸಿಲುಕಿ ಕಟ್ಟಿಕೊಂಡ ಗಂಡನನ್ನು ಬಿಟ್ಟು ಹೋದಂತಹ ಮೋಹಕತೆ, ಮತ್ತು ಆತ ತೊರೆದು ಮತ್ತೆ ಆಕೆ ಹಿಂದಿರುಗಿ ಬಂದಾಗ ಆತ ಆಕೆಯ ಮಗುವನ್ನು, ಆಕೆಯನ್ನು ಒಪ್ಪಿಕೊಂಡಂತಹ ಉನ್ನತವಾದ, ಅಂತಹ ಸಮಾಜದ ಕಟ್ಟುಪಾಡುಗಳನ್ನು ಮೀರುವ ಧೈರ್ಯ ನಮಗೆ ಅನೇಕ ಕಥೆಗಳಲ್ಲಿ ಎದ್ದು ಕಾಣುತ್ತವೆ. 'ಮೊಸರಿನ ಮಂಗಮ್ಮ' ಕಥೆ ಕೂಡ ಪ್ರಸಿದ್ಧವಾದದ್ದು. ಮಂಗಮ್ಮ ಮತ್ತು ಆಕೆಯ ಸೊಸೆಯ ಮುಖಾಂತರ ನಮ್ಮ ಸಮಾಜದ ಜೀವನ ಕ್ರಮವನ್ನು ಸಹಾನುಭೂತಿಯಿಂದ ಚಿತ್ರಿಸಿದ್ದಾರೆ. ಇನ್ನೊಬ್ಬರ ಸಮಸ್ಯೆಗಳಲ್ಲಿ ಭಾಗವಹಿಸಿ ಅದನ್ನು ಪರಿಹರಿಸುವ ಉತ್ಸಾಹ ಹಾಗೂ ಮಧ್ಯೆ ಬಂದು ಬುದ್ಧಿ ಹೇಳುವವರನ್ನ ಗೌರವಿಸುವ ಜನ, ಎಂತಹ ಸಂಗತಿಗಳನ್ನು ಉತ್ಪ್ರೇಕ್ಷೆ ಮಾಡದ, ಯಾವುದನ್ನೂ ನಗಣ್ಯಗೊಳಿಸದ ಮಾಸ್ತಿಯವರ ಕಥಾಲೋಕ ಆತ್ಮೀಯತೆಯಿಂದ ಓದುಗರನ್ನು ಸೆಳೆಯುತ್ತದೆ. ಬದುಕಿನ ಬಗ್ಗೆ ಕಳಕಳಿ, ಒಳ್ಳೆಯತನದ ಬಗ್ಗೆ ಗೌರವ, ಇನ್ನೊಬ್ಬರ ಸಮಸ್ಯೆಗಳಲ್ಲಿ ಭಾಗವಹಿಸುವುದು ಇವೆಲ್ಲವೂ ಇಲ್ಲಿವೆ. ಮಾಸ್ತಿಯವರು ಸಣ್ಣ ಕಥೆಗಳನ್ನು ಬರೆದ ಕಾಲಕ್ಕೆ ಈ ಪ್ರಕಾರ ಇಂಗ್ಲಿಷ್ ಸಾಹಿತ್ಯ ಸಂಪರ್ಕದಿಂದ ಭಾರತೀಯ ಭಾಷೆಗಳಲ್ಲಿ ಪ್ರಚಾರಗೊಂಡಿದ್ದಾಗಿತ್ತು. ಮಾಸ್ತಿ ಅವರ ವಿಶೇಷವೆಂದರೆ ಅವರು ಎಲ್ಲಿಯೂ ಇಂಗ್ಲಿಷ್ ಕಥೆಗಳನ್ನು ಅನುಸರಿಸಿಲ್ಲ, ಬದಲಿಗೆ ಸ್ವೋಪಜ್ಞತೆಯನ್ನೇ

ಮೆರೆದಿದ್ದಾರೆ ಎಂಬುದು. ಮಾಸ್ತಿ ಅವರ ಕಥೆಗಳನ್ನು ಚಿಕ್ಕವರಿಂದ ಹಿಡಿದು ಹಿರಿಯರ ತನಕ ಯಾವ ವಯೋಮಾನದವರು ಬೇಕಾದರೂ ಓದಬಹುದು. ಸರಳ, ಹೃದ್ಯವೂ ಆದ ಸುಭಗ ಸುಂದರ ಶೈಲಿ ಮಾಸ್ತಿಯವರದು. ಪದಗಳ ಅರ್ಥಕ್ಕಾಗಿ ಓದುಗರು ತಿಣುಕಾಡಬೇಕಿಲ್ಲ. ಓದಿದವರೆಲ್ಲರ ಹೃದಯದಲ್ಲೂ ಉನ್ನತ ಭಾವಗಳು, ಆದರ್ಶಗಳು, ಜೀವನ ಮೌಲ್ಯಗಳು ಜಾಗೃತವಾಗುವ ಹಾಗೆ ಮಾಸ್ತಿ ಅವರ ಸಣ್ಣ ಕಥೆಗಳಿವೆ.

ಸಣ್ಣ ಕಥೆ ಹಾಗೂ ಮಾಸ್ತಿ ಒಬ್ಬರು ಮತ್ತೊಬ್ಬರಿಗಾಗಿ ಎಂಬಂತೆ ಭಾಸವಾಗುತ್ತದೆ. 'ಬಿಳಿಗಿರಿ ರಂಗ' – ಭಕ್ತ ಮತ್ತು ಭಗವಂತನ ಮಧ್ಯ ಇರುವ ಸಂಬಂಧದ ಆತ್ಮೀಯತೆಗೆ ಸಂಬಂಧಿಸಿದ ಕಥೆ. 'ಕವಿಯ ಕೊನೆಯ ದಿನಗಳು' – ಸಿಂಹಾವಲೋಕನ ಕ್ರಮದಲ್ಲಿ ನಿರೂಪಿತವಾಗಿರುವ ಕಥೆ. 'ಆಚಾರ್ಯರ ಪತ್ನಿ' – ರಾಮಾನುಜಾಚಾರ್ಯರ ಬದುಕಿನಲ್ಲಿ ನಡೆದ ಸಂಗತಿಯನ್ನು, ಅವರ ಸನ್ಯಾಸತ್ವದ ಕಾರಣವನ್ನು ಆಧರಿಸಿ ರಚಿತವಾಗಿರುವಂತಹ ಕಥೆ. 'ಮಸೂಮತಿ' – ಅತ್ಯುಚ್ಚ ವೈಭವದಿಂದ ಕೂಡಿದ್ದ ಆಶ್ಚರ್ಯಕರ ಸಂಸ್ಕೃತಿ ನಾಗರಿಕತೆಗಳಿಂದ ಬಾಳಿ ಬೆಳಗಿದ ಭಾರತ ತನ್ನ ಸ್ವಾತಂತ್ರವನ್ನು ಕಳೆದುಕೊಂಡ ಮೇಲೆ, ತನ್ನ ಧನ ಕನಕಗಳ ಜೊತೆಯಲ್ಲಿ ಅಮೂಲ್ಯ ಕಲಾ ಕೃತಿಯನ್ನು ಕಳೆದುಕೊಂಡ ಚಿತ್ರಣವನ್ನು ನೀಡುವ ಕತೆ. 'ಕಲ್ಮಾಡಿಯ ಕೋಣ' – ಊರ ಮಾರಿಗೆ ಲೆಕ್ಕವಿಲ್ಲದಷ್ಟು ಕೋಣಗಳನ್ನು ಬಲಿ ಕೊಟ್ಟಿದ್ದ ಮುನಿಯ, ತನ್ನ ಕೋಣವನ್ನು ತಾನೇ ಬಲಿ ಕೊಡಬೇಕಾದ ಸಂದಿಗ್ಧ ಪರಿಸ್ಥಿತಿಯನ್ನು, ದುರಂತ ಸ್ಥಿತಿಯನ್ನು ಚಿತ್ರಿಸುವ ಕಥೆ. 'ವೆಂಕಟಶಾಮಿಯ ಪ್ರಣಯ' – ದೊಂಬರ ಹುಡುಗಿಯನ್ನು ಪ್ರೀತಿಸಿ ತಂದೆ ತಾಯಿಗಳ ಹಾಗೂ ಊರಿನವರ ಕೋಪಕ್ಕೆ ಗುರಿಯಾಗಿ ಪ್ರಣಯಕ್ಕೋಸ್ಕರ ಊರನ್ನೇ ತೊರೆದ ವೆಂಕಟಶಾಮಿಯ ಕಥೆ. 'ಸೋರಲೀ ಪ್ರಸಂಗ' – ಒಂದು ಹೆಣ್ಣಿಗಾಗಿ ಪರಸ್ಪರ ಕಾದಾಡುತ್ತಾ ಇಬ್ಬರು ತರುಣರ ಕಥೆ. 'ಉಗ್ರಪ್ಪನ ಯುಗಾದಿ' – ಯುಗಾದಿಯ ದಿನ ಸಡಗರದಿಂದ ದಿನ ಕಳೆಯಬೇಕಾದ ಗೌಡ ಉಗ್ರಪ್ಪನಿಗೆ ಅಂದಿನ ಬೆಳಗಿನಿಂದಲೂ ಜರುಗಿದ ಅನೇಕ ವಿಚಿತ್ರ ಘಟನೆಗಳಿಂದ ಯುಗಾದಿ ಉಗ್ರವೇ ಆಗಿ ಪರಿಣಮಿಸಿದ ಕಥೆ. 'ನೆಪೋಲಿಯನ್ ನ ಸೋಲು' – ಪ್ರಪಂಚವನ್ನೇ ನಡುಗಿಸಿ ಸರ್ವಾಧಿಕಾರಿಯಾಗಿ ಮೆರೆದಿದ್ದ ನೆಪೋಲಿಯನ್ ಸೆರೆಸಿಕ್ಕಿ ವಿಹೀನ ಹೃದಯನಾಗಿ, ಕನಸಿನಲ್ಲಾದ ಅಭಿಮಾನಭಂಗಕ್ಕೆ ಮಗುವಿನಂತೆ ಕಣ್ಣೀರಿಡುವ ಕರುಣಾಮಯ ಕಥೆ. 'ಕಾಕನ ಕೋಟೆ' (ಮೂಲದಲ್ಲಿ ಕಾಕಲೋಕ ಎಂದಿದೆ) – ದುಷ್ಟರ ಪ್ರಾಬಲ್ಯದಿಂದ ದೀನ ದುರ್ಬಲವಾದ ಜೀವಿಗಳಿಗೆ ದಿನನಿತ್ಯವೂ ಆಗುತ್ತಿರುವ ಅನ್ಯಾಯಗಳನ್ನು ಚಿತ್ರಿಸುವ ಕಥೆ.

ಸಾಮಾನ್ಯವಾಗಿ ಶ್ರೀನಿವಾಸರು ಕ್ರಿಯೆಗೆ ಒಂದು ಚೌಕಟ್ಟನ್ನು ಒದಗಿಸುತ್ತಾರೆ. ಒಬ್ಬರು ಇನ್ನೊಬ್ಬರಿಗೆ ಹೇಳಿದ ಕಥೆ, ಡೈರಿಯಲ್ಲಿ ಬರೆದ ಕಥೆ ಎಂದು, ಇಲ್ಲವೇ ಕ್ರಿಯೆಯನ್ನು ಕಾಲ ದೇಶಗಳಲ್ಲಿ ದೂರ ನಿಲ್ಲಿಸುತ್ತಾರೆ. ಗೌತಮಿ ಹೇಳಿದ ಕಥೆ, ಕೃಷ್ಣಮೂರ್ತಿಯ ಹೆಂಡತಿ – ಹೀಗೆ ಹಲವು ಕಥೆಗಳು ಒಬ್ಬರು ಮತ್ತೊಬ್ಬರಿಗೆ ನಿರೂಪಣೆ ಮಾಡುವ ಶೈಲಿಯಲ್ಲಿ ಸಾಗುತ್ತವೆ. ಅವರ ಆಸಕ್ತಿ, ಜೀವನ ಶ್ರದ್ಧೆ, ಲವಲವಿಕೆ, ಅನುಕಂಪ – ಇವುಗಳಲ್ಲಿ ಸಣ್ಣ ಕಥೆಯನ್ನು ಜೀವನ ಮೌಲ್ಯಗಳ ಚಿತ್ರಣದ

ಮಾಧ್ಯಮವನ್ನಾಗಿ ಮಾಡಿ ಜೊತೆಗೆ ಮನುಷ್ಯ ಸ್ವಭಾವದಲ್ಲಿ ಆಸಕ್ತಿಯನ್ನು ಉಳಿಸಿದ ಕೀರ್ತಿ ಶ್ರೀನಿವಾಸರಿಗೆ ಸಲ್ಲಬೇಕು. ಮಾಸ್ತಿ ಅವರದು ನಿರಾಡಂಬರ ತಂತ್ರ, ಒಬ್ಬರು ಇನ್ನೊಬ್ಬರಿಗೆ ಕಥೆಯನ್ನು ಹೇಳುವುದು ಮಾಸ್ತಿ ಅವರ ಕಥೆಗಳಲ್ಲಿ ಸಾಮಾನ್ಯ. ಈ ಚೌಕಟ್ಟನ್ನು ಎಷ್ಟು ರೀತಿಗಳಲ್ಲಿ ಬೆಳೆಸಿಕೊಂಡಿದ್ದಾರೆ ಎನ್ನುವುದು ಗಮನಿಸಬೇಕಾದ ಅಂಶ. ಸಾಂಪ್ರದಾಯಿಕ ನೀತಿಕಲ್ಪನೆಗೆ ಬದ್ಧರಾಗದೆ ವ್ಯಕ್ತಿ ಬೆಳೆಯುವುದು, ಬದುಕಿನಲ್ಲಿ ಸಾಮರಸ್ಯ – ಇವೆರಡಕ್ಕೂ ರಾಜಮಾರ್ಗ ಮಾಸ್ತಿಯವರು ಕಲಿಸಿಕೊಡುವ ನೀತಿ. ಸಮಕಾಲೀನ ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು, ಜೀವನದ ಏಳು–ಬೀಳುಗಳನ್ನು ಸದೃಢ ಮನಸ್ಸಿನಿಂದ ಸ್ವೀಕರಿಸಲು ಇವು ಕಲಿಸುತ್ತವೆ.

**ಪರಾಮರ್ಶನ ಗ್ರಂಥಗಳು:**

1. ಶೇಷಗಿರಿರಾವ್ ಎಲ್.ಎಸ್., (2017), ಹೊಸಗನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು: ಅಂಕಿತ ಪ್ರಕಾಶನ.
2. ಸಿದ್ದಲಿಂಗಯ್ಯ ಜಿ.ಎಸ್. ಮತ್ತು ಕೃಷ್ಣಯ್ಯ ಎಂ.ಎಚ್., (2021), ಸಾಲುದೀಪಗಳು, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
3. ಸತ್ಯನಾರಾಯಣ ಎಚ್.ಎಸ್., (2024), ನಗೆಮೊಗದಜ್ಜ ಮಾಸ್ತಿ, ಬೆಂಗಳೂರು: ಆಲಂಪು ಪ್ರಕಾಶನ.
4. ಮಾಸ್ತಿ ವೆಂಕಟೇಶ ಅಯ್ಯಂಗಾರ್, (2017), ಸಣ್ಣಕಥೆಗಳು ಸಮಗ್ರ ಭಾಗ–1, ಬೆಂಗಳೂರು: ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್.
5. ಮಾಸ್ತಿ ವೆಂಕಟೇಶ ಅಯ್ಯಂಗಾರ್, (2017), ಸಣ್ಣಕಥೆಗಳು ಸಮಗ್ರ ಭಾಗ–2, ಬೆಂಗಳೂರು: ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್.
6. ಮಾಸ್ತಿ ವೆಂಕಟೇಶ ಅಯ್ಯಂಗಾರ್, (2017), ಸಣ್ಣಕಥೆಗಳು ಸಮಗ್ರ ಭಾಗ–3, ಬೆಂಗಳೂರು: ಮಾಸ್ತಿ ವೆಂಕಟೇಶ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್.
7. ಹೊನ್ನಯ್ಯ ಸಿ.ಬಿ. (ಸಂ), (2008), ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ, ಬೆಂಗಳೂರು: ಜೈಭೀಮ್ ಪ್ರಕಾಶನ.
8. ಬಸವಾರಾಧ್ಯ ಎನ್. (ಸಂ), (1992), ಮಾಸ್ತಿ ಕಥಾ ಸಮೀಕ್ಷೆ, ಬೆಂಗಳೂರು: ಬಿ.ಎಂ.ಶ್ರೀ. ಸ್ಮಾರಕ ಪ್ರತಿಷ್ಠಾನ.
9. ದಂಡಪ್ಪ ಹೆಚ್. ಮತ್ತು ಸುಮಿತ್ರಾಬಾಯಿ ಬಿ.ಎನ್. (ಸಂ), (2006), ಸುವರ್ಣ ಸಾಹಿತ್ಯ ವಿಮರ್ಶೆ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಸುವರ್ಣ ಕರ್ನಾಟಕ ಯೋಜನೆ).